# ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಮಡಿಕೇರಿ, ಕೊಡಗು.

ಒ.ಎಸ್.ನಂಃ 115/2022

ಪಿಡಬ್ಲ್ಯುಃ -1

<u>ದಿನಾಂಕಃ 15.02.2024 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಡಿ ಎಂ ಕೆ ವಕೀಲರಿಂದಃ</u>

ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ ದಾವಾ ಸ್ವತ್ತಿಗೆ ನಾವು ಬರುವ ಮೊದಲೇ ಪ್ರತಿವಾದಿಗಳು ಬಂದಿದ್ದರಾ ಎಂದರೆ ನಾವು ಮತ್ತು ಅವರು ಒಟ್ಟಿಗೆ ಬಂದಿದ್ದೇವೆ. 1991 ರಲ್ಲಿ ನನ್ನ ತಂದೆಗೆ ಆಶ್ರಯ ಯೋಜನೆಯಡಿ ಜಾಗ ಬಂದಿರುತ್ತದೆ ಪ್ರತಿವಾದಿಗಳಿಗೆ ಯಾವಾಗ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆಶ್ರಯ ಯೋಜನೆಯಡಿ ಜಾಗ ಬರುವ ಮೊದಲು ನಾವು ಅದೇ ಜಾಗದಲ್ಲಿ ವಾಸವಿದ್ದೆವು ಆಶ್ರಯ ಯೋಜನೆಯಡಿ ಜಾಗ ಬಂದ ಬಗ್ಗೆ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸದರಿ ದಾಖಲೆಗಳು ನನ್ನ ತಮ್ಮನ ಬಳಿ ಇವೆ. ಸದರಿ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಈಗ ನನ್ನ ತಮ್ಮ ತೀರಿಕೊಂಡಿದ್ದಾನೆ. ಸಂಬಂಧಪಟ್ಟ ಇಲಾಖೆಯಿಂದ ಸದರಿ ದಾಖಲೆಗಳನ್ನು ತಂದು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ.

2. ನಾನು ದಾವೆ ಸಲ್ಲಿಸಿದಾಗ ಇದ್ದಂತಹ ದಾವಾ ಸ್ವತ್ತಿನ ಸ್ವರೂಪ ಈಗ ಇಲ್ಲ ಎಂದರೆ ಸಾಕ್ಷಿ ಮನೆ ಬೀಳುವ ಸ್ಥಿತಿಯಲ್ಲಿ ಇದ್ದುದರಿಂದ ಮನೆಯನ್ನು ಕೆಡವಿ ಬೇರೆ ಮನೆಯನ್ನು ಕಟ್ಟುತ್ತಿದ್ದೇವೆ ಎಂದು ನುಡಿಯುತ್ತಾರೆ. ಹೊಸ ಮನೆ ಕಟ್ಟುವ ಬಗ್ಗೆ ಅನುಮತಿ ದಾಖಲೆಯನ್ನು ಮತ್ತು ನಕಾಶೆಯನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸದರಿ ದಾಖಲೆಗಳು ನನ್ನ ಬಳಿ ಇವೆ, ಇನ್ನೂ ಹೊಸ ಮನೆ ಆಗಿರುವುದರಿಂದ ಸದರಿ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆಗಳು ಇಲ್ಲ. ಹೊಸ ಮನೆ ಕಟ್ಟುತ್ತಿರುವುದರಿಂದ ನಾನು ದಾವಾ ಸ್ವತ್ತಿನ ಚೆಕ್ಕುಬಂಧಿಯನ್ನು ಬದಲಾಯಿಸಿದ್ದೇನೆ ಎಂದರೆ ಸರಿಯಲ್ಲ.

3. ನಾನು ದಾವಾ ಸ್ವತ್ತಿಗೆ ಸಂಬಂಧ ಪಟ್ಟ ಹಾಗೆ ಮಾತ್ರ ನಾನು ದಾವಾದಲ್ಲಿ ಹೇಳಿದ್ದೇನೆ ವಿನಃ ಪೈಸಾರಿ ಜಾಗಕ್ಕೆ ಸಂಬಂಧಿಸಿದಂತೆ ಹೇಳಿಲ್ಲ ಎಂದರೆ ಸದರಿ ಜಾಗ ನಗರ ಸಭೆಗೆ ಸೇರಿದ್ದಾಗಿರುವುದರಿಂದ ನಾನು ಹೇಳಿರುವುದಿಲ್ಲ. ಸರ್ಕಾರಿ ಪೈಸಾರಿ ಜಾಗ ನನ್ನ ಮನೆಯ ಪೂರ್ವಕ್ಕೆ ಇದೆ ಹಾಗೂ ಪ್ರತಿವಾದಿಯ ಕಾಂಪೌಂಡ್ ಸಹ ನನ್ನ ಮನೆಯ ಪೂರ್ವಕ್ಕೆ ಇದೆ. ನನ್ನ ದಾವಾ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಯ ಕಾಂಪೌಂಡ್ ಇದೆ, ಪಶ್ಚಿಮಕ್ಕೆ ರಾಜುರವರ ಜಾಗ, ದಕ್ಷಿಣಕ್ಕೆ ಕೋಟೇರ ನಾಣಿಯ ಮನೆ ಮತ್ತು ಉತ್ತರಕ್ಕೆ ನಗರ ಸಭೆ ರಸ್ತೆ ಇದೆ.

4. ನನ್ನ ಹೊಸ ಮನೆಯು ಪ್ರತಿವಾದಿಯ ಕಾಂಪೌಂಡ್ ಗೋಡೆ 60-70 ಅಡಿ ದೂರ ಇದೆಯಾ ಎಂದರೆ ಇನ್ನೂ ಹತ್ತಿರದಲ್ಲಿ ಇದೆ ಆದರೆ ಅಡಿ ಲೆಕ್ಕದಲ್ಲಿ ನನಗೆ ಹೇಳಲು ಆಗುವುದಿಲ್ಲ. ನನ್ನ ಮನೆಯ ಪೂರ್ವಕ್ಕೆ ನಾನು ಹಂಚಿನ ಛಾವಣಿಗೆ ರಸ್ತೆಯ ಭಾಗಕ್ಕೆ ಶೀಟನ್ನು ಅಳವಡಿಸಿದ್ದೇನೆ ಎಂದರೆ ಕಾರು ನಿಲ್ಲಿಸಲು ಶೀಟನ್ನು ಅಳವಡಿಸಿಕೊಂಡಿದ್ದೇನೆ. ಸದರಿ ಶೀಟನ್ನು ಅಳವಡಿಸಲು ನಗರ ಸಭೆಯಿಂದ ಅನುಮತಿ ಪಡೆದಿರುವುದಿಲ್ಲ ಆದರೆ ಮೊದಲಿನಿಂದಲೂ ಶೀಟ್ ಹಾಗೇ ಇದೆ. ನನ್ನ ಮನೆಯ ಮುಂದೆ ಇರುವ ರಸ್ತೆಯು ಹೆಚ್ಚು ಕಡಿಮೆ ಎಷ್ಟು ಅಡಿ ಉದ್ದ ಮತ್ತು ಅಗಲ ಇದೆ ಎಂದರೆ ನನಗೆ ಅಡಿ ಲೆಕ್ಕ ಹೇಳಲು ಆಗುವುದಿಲ್ಲ.

5. ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ನನ್ನ ತಂದೆ ಇದ್ದಾಗ ಕಟ್ಟಿದ್ದರಿಂದ ಆ ದಾಖಲೆಗಳು ನನ್ನ ಬಳಿ ಇಲ್ಲ. ಪ್ರತಿವಾದಿಗಳು ಕಾಂಪೌಂಡ್ ಮೇಲೆ ಗೋಡೆ ಕಟ್ಟಲು ತಕರಾರು ಮಾಡಿದ್ದೀರಾ ಎಂದರೆ ನಾವು ದೇವಸ್ಥಾನಕ್ಕೆ ಹೋಗಿ ಬರುವಷ್ಟರಲ್ಲಿ ಗೋಡೆ ಕಟ್ಟಿದ್ದಾರೆ. ಸದರಿ ಗೋಡೆಯನ್ನು ಯಾವಾಗ ಕಟ್ಟಿದ್ದಾರೆ ಎಂದರೆ ನನ್ನ ತಂದೆ ಇರುವಾಗಲೇ ಕಟ್ಟಿದ್ದಾರೆ. ಸಾಮಾನ್ಯವಾಗಿ ಮನೆ ಕಟ್ಟುವಾಗ ಕಂಬಗಳಿಗೆ ಅಳವಡಿಸಿದ್ದ ಕಂಬಿಯನ್ನು ಹಾಗೇ ಬಿಟ್ಟಿರುವುದು ಕಾಣುತ್ತದೆ ಎಂದರೆ ಅವರಿಗೆ ಸಂಬಂಧಪಟ್ಟ ಜಾಗದಲ್ಲಿ ಮಾತ್ರ ಮನೆಯನ್ನು ಕಟ್ಟುತ್ತಾರೆ ಆದರೆ ಪ್ರತಿವಾದಿಗಳು ನಮ್ಮ ಮನೆಗೆ ಒತ್ತಿಕೊಂಡು ಕಂಬವನ್ನು ಅಳವಡಿಸಿದ್ದಾರೆ.

6. ನಿಪಿ-19 ಭಾವಚಿತ್ರದಲ್ಲಿ ನಮ್ಮ ಮನೆ ಕಾಣುತ್ತಿಲ್ಲ ಎಂದರೆ ಸರಿ ಆದರೆ ಕಾರು ಶೆಡ್ಡಿಗೆ ಹೊಂದಿಕೊಂಡಂತೆ ಮನೆ ಇದೆ. ಪ್ರತಿವಾದಿಯ ಮನೆಯ ಬಲ ಭಾಗಕ್ಕೂ ಸಹ ಕಂಬಗಳು ಹಾಗೇ ಕಾಣುತ್ತವೆ ಎಂದರೆ ನಾವು ತಿರುಪತಿಗೆ ಹೋಗಿ ಬರುವ ಮೊದಲೇ ಕಂಬಗಳನ್ನು

ಕಟ್ಟಿರುತ್ತಾರೆ. ಪ್ರತಿವಾದಿಗಳು ಕಂಬ ಕಟ್ಟಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರು ಕೋಟ್ಟಿದ್ದೀರಾ ಎಂದರೆ ದೂರು ಕೊಟ್ಟಿದ್ದೇವೆ ಹಾಗೂ ನಗರ ಸಭೆಗೆ ದೂರು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಾನು ಪೊಲೀಸ್ ಠಾಣೆಗೆ ಕೊಟ್ಟ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

7. ನಾನು ಈಗ ಹಳೆ ಮನೆ ಜಾಗ ಇದ್ದದಲ್ಲಿ 91.044 ಸ್ಕೇರ್ ಮೀಟರ್ ನಲ್ಲಿ ಮನೆ ಕಟ್ಟುತ್ತಿದ್ದೇನೆ. ಸದರಿ ಹಳೆ ಮನೆ ಇದ್ದ ಜಾಗದಲ್ಲಿ ಹೊಸ ಮನೆ ಕಟ್ಟುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಈಗಿರುವ ದಾವಾ ಸ್ವತ್ತಿಗೂ ಆಗಿರುವ ದಾವಾ ಸ್ವತ್ತಿಗೂ ಸಂಪೂರ್ಣ ಬದಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಳೆ ಮನೆ ಇದ್ದ ಜಾಗದಲ್ಲೇ ಹೊಸ ಮನೆಯನ್ನು ಕಟ್ಟುತ್ತಿದ್ದೇವೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ.